North Asian International Research Journal of Multidisciplinary

IRJIF IMPACT FACTOR:6.019

ISSN: 2454-2326 Vol.11, Issue, 2 February-2025

Index Copernicus Value: 58.12 Indian Citation Index

NAIRJC A Peer Reviewed Refereed Journal

doiglobal.org/doilink/10.2025/67bd581335cd7

# ಪ್ರೇರಕ ಮಹಿಳೆ ಸುಧಾಮೂರ್ತಿ

***SMT. GOURAMMA MATHAPATI**

**Assistant Professor Department of Kannada Guru Nanak First Grade College Bidar.Karnataka State*

*ABSTRACT*

ಭಾರತದ ದೇಶದ ಈ ಪೂಣ್ಯ ಭೂಮಿಯಲ್ಲಿ ಸಾವಿತ್ರಿಬಾಯಿ ಫುಲೆ, ರಮಾಬಾಯಿ, ಮದರ್ ತೆರೇಸಾ, ಕಲ್ಪನಾ ಚಾವ್ಲಾ, ಸರೋಜನಿ ನಾಯ್ಡು ಮತ್ತು ಇತರ ಅನೇಕ ಮಹಿಳೆಯರು ಭಾರತೀಯ ಸಮಾಜಕ್ಕೆ ಸ್ಪೂರ್ತಿಯ ದ್ಯೋತಕರಾಗಿದ್ದಾರೆ. ಹಲವಾರು ಮಹಿಳೆಯರು ಸಮಾಜವನ್ನು ಉನ್ನತೀಕರಿಸಿದ್ದಾರೆ ಮತ್ತು ನಮ್ಮ ರಾಷ್ಟ್ರಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಅಂತಹ ಮಹಿಳಾ ಸಾಧಕಿಯರಲ್ಲಿ ಒಬ್ಬರು ಶ್ರೀಮತಿ ಸುಧಾಮೂರ್ತಿ, ಇವರು ಸರಳತೆ, ಸಜ್ಜನಿಕೆಗೆ ಹೆಸರಾದ ಸಮೃದ್ಧ ಲೇಖಕಿ. ಸುಧಾಮೂರ್ತಿಯವರು ತಮ್ಮ ಬರಹಗಳು, ಲೋಕೋಪಕಾರ ಮತ್ತು ಸಮಾಜದ ಸೇವೆಯಿಂದಾಗಿ ನಾಡಿನಲ್ಲಿ ಗೌರವಿಸಲ್ಪಟ್ಟಿದ್ದಾರೆ.

KEYWORDS: ಸುಧಾಮೂರ್ತಿಯವರ ಜೀವನ, ಶಿಕ್ಷಣ, ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಕೊಡುಗೆ, ಸಮಾಜ ಸೇವೆ, ಸರಳ ಜೀವನ.

## INTRODUCTION:

ಶ್ರೀಮತಿ ಸುಧಾಮೂರ್ತಿ ಈ ಹೆಸರಿನಲ್ಲಿಯೇ ಅದೇನೋ ಒಂದು ಆಕರ್ಷಣೆ, ಕ್ರಿಯಾಶೀಲತೆಯಿದೆ. ಕನ್ನಡ ಮಣ್ಣಿನ ಕುವರಿ, ಅಸಾಮಾನ್ಯ ಸಾಧಕಿ ಇವರು ಕನ್ನಡ ಮತ್ತು ಇಂಗ್ಲಿಷನ ಖ್ಯಾತ ಬರಹಗಾರತಿ, ಸಮಾಜ ಸೇವಕಿಯೂ ಆಗಿರುವ ಸುಧಾಮೂರ್ತಿಯವರು ಜನಸಾಮಾನ್ಯರ ಏಳಿಗೆಗಾಗಿ ಹಲವು ಸಂಘ ಸಂಸ್ಥೆಗಳನ್ನು ಕಟ್ಟಿ ದುಡಿಯುತ್ತಿದ್ದಾರೆ. ಇನ್ಫೋಸಿಸ್ ಪ್ರತಿಷ್ಠಾನದ ಮೂಲಕ ಸಮಾಜ ಸೇವೆಯೊಂದಿಗೆ ಜನ ಸಾಮಾನ್ಯರ ಸಮಸ್ಯೆಗಳಿಗೆ ಮಿಡಿಯುವವರು ಇವರು.

'ಆಡು ಮುಟ್ಟದ ಸೊಪ್ಪಿಲ್ಲ; ಸುಧಾಮೂರ್ತಿಯವರು ಕೈಯಾಡಿಸದ ಕ್ಷೇತ್ರವಿಲ್ಲ'. ಗ್ರಾಮೀಣಾಭಿವೃದ್ಧಿ ಮತ್ತು ಸಮಾಜ ಸುಧಾರಣೆಗಾಗಿ ಇವರು ಸದಾ ಶ್ರಮಿಸುತ್ತಿದ್ದಾರೆ. ಸರಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ಕಂಪ್ಯೂಟರ ಶಿಕ್ಷಣ ಮತ್ತು

ಗ್ರಂಥಾಲಯ ಸೌಲಭ್ಯ ಒದಗಿಸುವುದು ಅವರ ಮಹತ್ವದ ಗುರಿ. ತಮ್ಮ ಬಿಡುವಿಲ್ಲದ ಸಮಾಜಕಾರ್ಯದ ನಡುವೆಯೂ ಇವರು ಅನೇಕ ಕಥೆ, ಕಾದಂಬರಿಗಳನ್ನು ಬರೆದಿರುವ ಜನಪ್ರಿಯ ಬರಹಗಾರ್ತಿಯೂ ಹೌದು. ಇವರು 'ಗೇಟ್ಸ್ ಫೌಂಡೇಶನ್'ನ ಆರೋಗ್ಯ ಸುಧಾರಣಾ ಕ್ರಮಗಳ ಭಾಗಿವಾಗಿಯೂ ಸಮಾಜ ಸೇವೆ ಸಲ್ಲಿಸುತ್ತಿದ್ದಾರೆ.

ಸುಧಾಮೂರ್ತಿ ಅವರು ಧಾರವಾಡ ಜಿಲ್ಲೆಯ (ಇಂದಿನ ಹಾವೇರಿ ಜಿಲ್ಲೆ) ಶಿಗ್ಗಾಂವದ ಕುಲಕರ್ಣಿ ಮನೆತನದಲ್ಲಿ ಆಗಷ್ಟ 19 ರಂದು 1950 ರಲ್ಲಿ ಜನಿಸಿದರು. ಸುಧಾ ಕುಲರ್ಣಿ ಅವರ ತಂದೆ ರಾಮಚಂದ್ರ ಕುಲಕರ್ಣಿಯವರು ಹುಬ್ಬಳ್ಳಿಯ ಪ್ರಸಿದ್ಧ ಕರ್ನಾಟಕ ವೈದ್ಯಕೀಯ ಕಾಲೇಜಿನಲ್ಲಿ ಸ್ತ್ರೀರೋಗ ತಜ್ಞರು ಹಾಗೂ ಪ್ರಾಧ್ಯಾಪಕರಾಗಿದ್ದರು. ತಾಯಿ ವಿಮಲಾಬಾಯಿ ಪದವಿ ಪರೀಕ್ಷೆಯಲ್ಲಿ ಚಿನ್ನದ ಪದಕ ಪಡೆದ ಪ್ರತಿಭಾವಂತ ವಿದ್ಯಾರ್ಥಿನಿಯಾಗಿದ್ದರು. ಈ ದಂಪತಿಗಳಿಗೆ ನಾಲ್ಕು ಜನ ಮಕ್ಕಳು, ಆ ನಾಲ್ಕು ಜನರಲ್ಲಿ ಸುಧಾಮೂರ್ತಿಯವರು ಒಬ್ಬರು. ಇವರು ಪ್ರಾಥಮಿಕ, ಮಾಧ್ಯಮಿಕ, ಹೈಸ್ಕೂಲ್ ವಿದ್ಯಾಭ್ಯಾಸವನ್ನು ಅವರ ಹುಟ್ಟೂರಾದ ಶಿಗ್ಗಾಂವದಲ್ಲಿ ಮುಗಿಸಿದರು.

ಹುಬ್ಬಳ್ಳಿಯ ನ್ಯೂ ಎಜುಕೇಶನ್ ಸೊಸೈಟಿಯ ಗರ್ಲ್ಸ್ ಇಂಗ್ಲಿಷ ಮಾಧ್ಯಮ ಶಾಲೆಯಲ್ಲಿ 10ನೆಯ ತರಗತಿಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದರು. 1974 ರಲ್ಲಿ ಧಾರವಾಡ ಜಿಲ್ಲೆಯ ಹುಬ್ಬಳ್ಳಿಯ ಬಿ. ವಿ. ಭೂಮರಡ್ಡಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ (ಬಿ.ಇ.) ಪದವಿಯನ್ನು ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾದರು. ಮುಂದೆ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯಲ್ಲಿ ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂ.ಇ. (ಸ್ನಾತಕೋತ್ತರ) ಪದವಿಯನ್ನು ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾದರು. ಸುಧಾಮೂರ್ತಿಯವರು ತಮ್ಮ ವೃತ್ತಿ ಜೀವನವನ್ನು ಕಂಪ್ಯೂಟರ್ ವಿಜ್ಞಾನದ ಇಂಜಿನಿಯರಾಗಿ ಆರಂಭಿಸಿದರು. ಸುಧಾಮೂರ್ತಿಯವರು ಟೆಲ್ಕೊ ಕಂಪನಿಯಲ್ಲಿ ಪುಣೆ, ಮುಂಬೈ ಹಾಗೂ ಜೆಮಶೇಡಪುರ ಶಾಖೆಗಳಲ್ಲಿ ಡೆವಲಪ್ಮೆಂಟ್ ಇಂಜಿನಿಯರ್ ಆಗಿ ದುಡಿಯುವುದರ ಜೊತೆಗೆ ಟೆಲಿಕಾಗೆ ಪ್ರವೇಶ ಪಡೆದ ಪ್ರಥಮ ಮಹಿಳಾ ಇಂಜಿನಿಯರ್ ಎನ್ನುವ ಹೆಗ್ಗಳಿಕೆಗೆ ಪಾತ್ರರಾದರು. ನಂತರ ವಾಲ್ ಚಂದ್ ಗ್ರೂಪ್ ಆಫ್ ಇಂಡಸ್ಟ್ರಿನಲ್ಲಿ ಸೀನಿಯರ್ ಸಿಸ್ಟಮ್ ಅಸಿಸ್ಟಂಟ್ ಆಗಿ ಕೆಲಕಾಲ ಸೇವೆ ಸಲ್ಲಿಸಿದರು. ಸುಧಾ ಮೂರ್ತಿ ಅವರು ಇನ್ಫೋಸಿಸ್‌ನ ಸಹ ಸಂಸ್ಥಾಪಕ ನಾಗವಾರ ರಾಮರಾವ ನಾರಾಯಣಮೂರ್ತಿ(ಎನ್‌ಆರ್‌ಎನ್) ಅವರನ್ನು 1978 ರಲ್ಲಿ ವಿವಾಹವಾದರು. ಇವರ ವಿವಾಹ ಅತ್ಯಂತ ಸರಳವಾಗಿ ನಡೆಯಿತು. ಈ ದಂಪತಿಗಳ ಮದುವೆಗೆ ಒಟ್ಟು ಖರ್ಚು ಆದದ್ದು 800 ರೂಪಾಯಿಗಳು. ಅದರಲ್ಲಿ ಸುಧಾಮೂರ್ತಿ 400 ರೂಪಾಯಿ ನೀಡಿದರು, ನಾರಾಯಣಮೂರ್ತಿಯವರು 400 ರೂಪಾಯಿ ನೀಡಿದರು. ಇದು ಅವರ ಸರಳತೆಗೆ ಹಿಡಿದ ಕನ್ನಡಿ. ಅವರ ಪತಿ ನಾರಾಯಣ ಮೂರ್ತಿ ಅವರು ಭಾರತದ ಐಟಿ ಉದ್ಯಮದ ಪ್ರವರ್ತಕರಲ್ಲಿ ಒಬ್ಬರು. ಇವರಿಗೆ ಇಬ್ಬರು ಮಕ್ಕಳಿದ್ದಾರೆ. ಮಗಳು ಅಕ್ಷತಾಮೂರ್ತಿ ಇವರು ಗಿಪಿ ಪ್ರಧಾನಿ ರಿಷಿ ಸುನಕ್ ಅವರನ್ನು ವಿವಾಹವಾಗಿದ್ದಾರೆ. ಮಗ ರೋಹನಮೂರ್ತಿ ಶ್ರೇಷ್ಠ ಉದ್ಯಮಿಯಾಗಿದ್ದಾರೆ.

ಸುಧಾ ಕುಲಕರ್ಣಿಯವರಿಗೆ ಉದ್ಯಮಶೀಲತೆಯ ಗುಣ ಹೊಂದಿರುವ ಕಾರಣ ಸಹೋದರಿ ಜಯಶ್ರೀ ದೇಶಪಾಂಡೆ ಮತ್ತು ಅವರ ಪತಿ ಗುರುರಾಜ ದೇಶಪಾಂಡೆ ಅವರ ಜೊತೆಗೂಡಿ ಉದ್ಯಮಶೀಲತೆಯ ಗುಣ ಬೆಳೆಸುವ ಉದ್ದೇಶದೊಂದಿಗೆ 1996 ರಲ್ಲಿ ದೇಶಪಾಂಡೆ ಪ್ರತಿಷ್ಟಾನ ಹುಟ್ಟುಹಾಕಿದರು. ನಂತರ 1996 ರಲ್ಲಿ ತಮ್ಮ ಪತಿ ನಾರಾಯಣಮೂರ್ತಿಯವರ ಜೊತೆಗೂಡಿ ಇನ್ಫೋಸಿಸ್ ಫೌಂಡೇಶನ್ ಅನ್ನು ಆರಂಭಿಸಿದರು. ಸುಧಾ ಮೂರ್ತಿಯವರು ತಾಂತ್ರಿಕ ಶಿಕ್ಷಣ ಪಡೆದು ದೊಡ್ಡ ಸಂಸ್ಥೆ ಸ್ಥಾಪನೆ ಮಾಡಿ ಲಕ್ಷಾಂತರ ಜನರಿಗೆ ಉದ್ಯೋಗ ನೀಡುವುದರ ಜೊತೆಗೆ ಬೆಂಗಳೂರನ್ನು ಸಿಲಿಕಾನ್ ಸಿಟಿಯನ್ನಾಗಿಸಿ, ದೇಶ ಮತ್ತು ವಿದೇಶಗಳಲ್ಲಿ ಕರ್ನಾಟಕದ ಕೀರ್ತಿ ಪತಾಕೆಯನ್ನು ಹಾರಿಸುವುದರಲ್ಲಿ ಇವರ ಪಾತ್ರ ಹಿರಿದಾಗಿದೆ. ವಿಶ್ವದಲ್ಲಿನ ವಿದ್ಯಾವಂತರು ಬೆಂಗಳೂರಿನೆಡೆಗೆ ಧಾವಿಸುವಂತೆ ಮಾಡಿದರು. ದೇಶ–ವಿದೇಶಗಳಲ್ಲಿ ಹಲವಾರು ಶಾಖೆಗಳನ್ನು ಸ್ಥಾಪಿಸುವುದರ ಜೊತೆಗೆ ಕೋಟಿ ಕೋಟಿ ದುಡಿಯುವ ಕೈಗಳಿಗೆ ಕೆಲಸ ನೀಡಿದ್ದಾರೆ.

**ಸರಳತೆ :**

ಜೀವನದಲ್ಲಿ ತುಂಬಾ ಸರಳವಾಗಿರುವುದನ್ನು ಕೆಲವು ವ್ಯಕ್ತಿಗಳನ್ನು ನೋಡಿ ಕಲಿಯಬೇಕಾಗುತ್ತದೆ. ಇದಕ್ಕೆ ತಾಜಾ ಉದಾಹರಣೆಯೆಂದರೆ ಸುಧಾಮೂರ್ತಿಯವರು. ಇವರು ಎಷ್ಟೇ ಶ್ರೀಮಂತರಾಗಿದ್ದರೂ ತುಂಬಾ ಸರಳತೆಯ ಬದುಕನ್ನು ಅನುಸರಿಸಿಕೊಂಡು ಹೋಗುತ್ತಿದ್ದಾರೆ, ಹೀಗಾಗಿಯೇ ಅವರು ಹೆಚ್ಚಿನ ಜನರಿಗೆ ಪ್ರೇರಣೆಯಾಗಿದ್ದಾರೆ. ಇಂದಿನ ಅಢಂಬರದ ದಿನಗಳಲ್ಲಿ 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು' ಎಂಬ ನಾಣ್ಣುಡಿಯಂತೆ ಹಣವಿಲ್ಲದಿದ್ದರೂ ಶೋಕಿಯಿಂದ ಬದುಕುವವರೇ ಹೆಚ್ಚಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಕೋಟಿಗಟ್ಟಲೆ ಹಣವಿದ್ದರೂ ಸರಳತೆ ಪಾಲಿಸಿಕೊಂಡು ಹೋಗುವುದು ಅಷ್ಟು ಸುಲಭದ ಮಾತಲ್ಲ. ಕೆಲವರು ಇದನ್ನು ಜಿಪುಣತನ ಅನ್ನಬಹುದು. ಆದರೆ ನಿಜವಾಗಿಯೂ ಸರಳತೆ ಮತ್ತು ಜಿಪುಣತನಕ್ಕೆ ಅಜಗಜಾಂತರ ವ್ಯತ್ಯಾಸವಿದೆ. ಸರಳತೆಗೆ ಮತ್ತೊಂದು ಹೆಸರೇ ಸುಧಾಮೂರ್ತಿ.

ಇಂದು ಬೆಂಗಳೂರನ್ನು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಬೆಳೆಸಿದ ಕೀರ್ತಿ ಈ ಮಹಾನ ಮಹಿಳೆಗೆ ದೊರೆಯುತ್ತದೆ. ಸಾಧಾರಣ ಜೀವನ ಶೈಲಿಯೊಂದಿಗೆ ಎಲ್ಲರೊಂದಿಗೆ ಸರಾಗವಾಗಿ ಬೆರೆಯುವ ಸಾಧಾರಣ ಮಹಿಳೆ ಎಂದೇ ಹೆಸರುವಾಸಿಯಾದವರು ಸುಧಾಮೂರ್ತಿ. ಸುಧಾಮೂರ್ತಿ ಎಂದಾಕ್ಷಣ ಜನರು ನೆನಪಿಸಿಕೊಳ್ಳುವುದು ಅವರ ಸರಳ ಜೀವನ ಶೈಲಿ. ಒಬ್ಬ ಮಹಿಳೆಯಾಗಿ ತಂತ್ರಜ್ಞಾನ ಕ್ಷೇತ್ರ ಮಾತ್ರವಲ್ಲದೆ ಸಮಾಜ ಸೇವೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸುಧಾ ಮೂರ್ತಿಯವರು ಹಲವು ದೇವಸ್ಥಾನಗಳ ಜೀರ್ಣೋದ್ಧಾರ ಮಾಡುವುದರ ಜೊತೆಗೆ ಭಾರತೀಯ ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ತಮ್ಮ ದೇಶದ ಸಂಸ್ಕೃತಿಯನ್ನು ಉಳಿಸಿ ಮತ್ತು ಬೆಳೆಸಿಕೊಂಡು ಹೋಗುವುದರ ಜೊತೆಗೆ ಅನ್ನ ದಾಸೋಹ, ಶಿಕ್ಷಣ ದಾಸೋಹ ಮುಂತಾದ ಕಾರ್ಯ ಕೈಗೊಂಡವರು. ಸುಧಾಮೂರ್ತಿ ಅವರನ್ನು ನಾವು ಮುಂದಿನ ಪೀಳಿಗೆಗೆ ಪರಿಚಯ ಮಾಡಿಕೊಡಬೇಕಾದದ್ದು ಅತಿ ಅವಶ್ಯಕವಾಗಿದೆ. ಸನ್ಮಾರ್ಗ, ಅಸಾಧಾರಣ ವ್ಯಕ್ತಿತ್ವದಿಂದ ಹೆಸರಾದ ಸುಧಾಮೂರ್ತಿ ಅವರು ಗ್ರಾಮೀಣ ಭಾಗದ ಜನರ ಜೀವನ ಅಭಿವೃದ್ಧಿಗಾಗಿ ಪ್ರಮುಖ ಕಾರ್ಯಗಳನ್ನು ನೆರವೇರಿಸಿದ್ದಾರೆ ಶಿಕ್ಷಣ ನೀಡಿ ದೇಶದಲ್ಲಿ ಜ್ಞಾನದ ದೀಪ ಬೆಳಗಿಸಿ ತಂತ್ರಜ್ಞಾನ ಯುಗಕ್ಕೆ ತಕ್ಕಂತೆ ದೇಶವನ್ನು ಬೆಳೆಸುವಲ್ಲಿ ತಂತ್ರಜ್ಞಾನ ಮಹತ್ವದ ಪಾತ್ರವಹಿಸುವುದರಿಂದ ಗ್ರಾಮೀಣ ವಿದ್ಯಾರ್ಥಿಗಳಿಗೆ ಇತರ ವಿಷಯಗಳ ಜೊತೆಗೆ ತಂತ್ರಜ್ಞಾನದ ಶಿಕ್ಷಣ ನೀಡಿ ದೇಶದಲ್ಲಿ ತಂತ್ರಜ್ಞಾನದ ಬೆಳವಣಿಗೆಗೆ ಶ್ರಮಿಸಿದ್ದಾರೆ. ಇವರು ತರಬೇತಿ ಕೇಂದ್ರಗಳನ್ನು ನಡೆಸುವುದರ ಮೂಲಕ ಜನ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಾರೆ. 'ಒಬ್ಬ ಮಹಿಳೆ ಕಲಿತರೆ ಒಂದು ಕುಟುಂಬ ಕಲಿತಂತೆ' ಎನ್ನುವ ಮಾತಿಗೆ ಸಾಕ್ಷಿಯಾದವರು ನಮ್ಮ ಹೆಮ್ಮೆಯ ಕನ್ನಡತಿ, ಸರಳತೆಯ ಮೂರ್ತಿ ಸುಧಾಮೂರ್ತಿ. ಇವರ ಸಾಮಾಜಿಕ ಕಳಕಳಿಯನ್ನು ಅರಿತು ಕೇಂದ್ರ ಸರಕಾರ 2024 ರಲ್ಲಿ ಪದ್ಮ ವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ.

**ಸಾಹಿತ್ಯ:**

ಸುಧಾಮೂರ್ತಿ ಅವರ ಜೀವನ ಜನರಿಗೆ ಉದ್ಯೋಗ ನೀಡುವುದಷ್ಟೇ ಅಲ್ಲದೆ ಸಾಮಾಜಿಕ ಕಾಯ ಕೈಗೊಳ್ಳುವುದರ ಜೊತೆಗೆ ಬರವಣಿಗೆಯ ಹವ್ಯಾಸ ಹೊಂದಿದ್ದಾರೆ. ಇವರು ಯುವ ಪೀಳಿಗೆಗೆ ಮಾದರಿಯಾಗುವ ರೀತಿಯಲ್ಲಿ ಅನೇಕ ಲೇಖನಗಳನ್ನು ರಚಿಸಿದ್ದಾರೆ. ಸಾಮಾಜಿಕ ಜೀವನ, ಸಾಮಾನ್ಯ ಜೀವನ, ಜನರ ಜೀವನವನ್ನು ಬರವಣಿಗೆಯಲ್ಲಿ ಪ್ರಕಟಿಸಿದ್ದಾರೆ. ಇವರು ಕನ್ನಡ ಮತ್ತು ಇಂಗ್ಲೀಷನಲ್ಲಿ ಹಲವು ಕೃತಿಗಳನ್ನು ಬರೆದಿದ್ದಾರೆ. ಅವು ಇಂತಿವೆ.

**ಕನ್ನಡ ಕೃತಿಗಳು:**

- ಹಕ್ಕಿಯ ತೆರದಲಿ
- ಶಾಲಾ ಮಕ್ಕಳಿಗಾಗಿ ಕಂಪ್ಯೂಟರ್
- ಕಾವೇರಿಯಿಂದ ಮೇಕಾಂಗಿಗೆ

- ಡಾಲರ್ ಸೊಸೆ
- ಮಹಾಶ್ವೇತೆ
- ಅತಿರಿಕ್ತೆ
- ಪರಿಧಿ
- ಮನದ ಮಾತು (ಅಂಕಣ ಬರಹಗಳ ಸಂಗ್ರಹ)
- ಗುಟ್ಟೊಂದು ಹೇಳುವೆ
- ಸಾಮಾನ್ಯರಲ್ಲಿ ಅಸಾಮಾನ್ಯರು
- ತುಮುಲ
- ಋಣ
- ಯಶಸ್ವಿ
- ಏರಿಳಿತದ ದಾರಿಯಲ್ಲಿ
- ನೂನಿಯ ಸಾಹಸಗಳು

ಇಂಗ್ಲಿಷ ಪುಸ್ತಕಗಳು:

- The Serpent's Revenge
- How I Taught My Grandmother to Read.
- Something Happened on the Way to Heaven
- The Old Man and His God: Discovering the Spirit of India
- The Day I Stopped Drinking Milk
- Wise and Otherwise
- Gently Falls the Bakula
- The Accolades Galore

ಹತ್ತು ಹಲವಾರು ಕಥೆ, ಕಾದಂಬರಿಗಳನ್ನು ಬರೆಯುವುದರ ಮೂಲಕ ಉತ್ತಮ ಬರಹಗಾರತಿಯೂ ಆಗಿರುವ ಸುಧಾಮೂರ್ತಿಯವರು ವಿದ್ಯಾರ್ಥಿ ಜೀವನದಿಂದಲೇ ಹಲವಾರು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದ್ದಾರೆ. ಸಮಾಜ ಸೇವೆಗಾಗಿ ಅಸಾಮಾನ್ಯ ಕೊಡುಗೆ ನೀಡಿ ನಿರಂತರ ಶ್ರಮಿಸುತ್ತಿರುವ ಇವರಿಗೆ ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿಯನ್ನು, ಸಾಮಾಜಿಕ ಸೇವೆಗಾಗಿ ಪದ್ಮ ವಿಭೂಷಣ ಪ್ರಶಸ್ತಿಯನ್ನು ನೀಡಿದ್ದಾರೆ. ಕರ್ನಾಟಕ ಸರ್ಕಾರದ ಅತ್ಯುನ್ನತ ಗೌರವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಕೂಡ ಇವರು ಭಾಜನರಾಗಿದ್ದಾರೆ. ಮೈಸೂರು ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯಗಳು ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿವೆ. ಉದ್ಯೋಗ ಸೃಷ್ಟಿಸಿ, ಉದ್ಯೋಗ ಬೆಳೆಸಿ ತಂತ್ರಜ್ಞಾನದ ಮೂಲಕ ಭಾರತ ದೇಶದ ಹೆಸರು ಕರ್ನಾಟಕ ರಾಜ್ಯದ ಹೆಸರು ಪ್ರಪಂಚದ ತುಂಬೆಲ ಬೆಳೆಸಿ ಪ್ರಪಂಚವೇ ನಿಬ್ಬೆರಗಾಗಿ ನೋಡುವಂತೆ ಕೀರ್ತಿ ಬೆಳಗಿಸಿದ್ದಾರೆ. ಬ್ರಿಟನ್ ಪ್ರಧಾನಿಯ ಅತ್ತೆಯೆಂದು ಹೇಳಬೇಕಾದಂತ ಹೆಮ್ಮೆಯ ಮಹಿಳೆಗೆ ಭಾರತ ದೇಶದಲ್ಲಿ ಬ್ರಿಟನ್ ಪ್ರಧಾನಿಯನ್ನು ಪರಿಚಯಿಸಬೇಕಾದರೆ ಸುಧಾಮೂರ್ತಿ ಅವರ ಅಳಿಯನೆಂದೇ ಪರಿಚಯಿಸಬೇಕಾಗುತ್ತದೆ. ಸುಧಾಮೂರ್ತಿ ಅವರು

ತಂತ್ರಜ್ಞಾನದಲ್ಲಿ ಉದ್ಯೋಗ ಸೃಷ್ಟಿಸುವ ಮಹಿಳೆ ಮಾತ್ರ ಆಗಿರದೆ, ಯುವ ಪೀಳಿಗೆಗೆ ಶಿಕ್ಷಣ, ಸಮಾಜ ಸೇವೆ, ಸಂಸ್ಕೃತಿ, ಸರಳ ಜೀವನಕ್ಕೆ ಮಾದರಿಯಾಗಿದ್ದಾರೆ. ಹೆಮ್ಮೆಯ ಕೀರ್ತಿಯ ಮರ ಸುಧಾಮೂರ್ತಿ.

**ಸಮಾಜ ಸೇವೆ:**

ಸುಧಾಮೂರ್ತಿಯವರು ಮೊದಲಿನಿಂದಲೂ ತಮ್ಮ ಅನೇಕ ಸಮಾಜ ಸುಧಾರಣೆ ಸೇವೆಗಳಿಗೆ ಹೆಸರಾದವರು. ಅವರಿಗೆ ಮಹಿಳಾ ಸಬಲೀಕರಣದ ಗುರಿಯಿದೆ. ಗ್ರಾಮೀಣ ಜನರಲ್ಲಿ ಶಿಕ್ಷಣ, ಸಾಮಾಜಿಕ ನೈರ್ಮಲ್ಯ, ಬಡತನ ನಿರ್ಮೂಲನೆ ಮತ್ತು ಇನ್ನೂ ಅನೇಕ ವಿಷಯಗಳ ಕುರಿತು ಅವರು ಜಾಗೃತಿ ಮೂಡಿಸುತ್ತಿದ್ದಾರೆ. ಸ್ವಚ್ಛ ಭಾರತದ ಅಗತ್ಯತೆಯನ್ನು ಅರ್ಥಮಾಡಿಕೊಂಡಿರರುವ ಅವರು, ಸಾರ್ವಜನಿಕ ಶೌಚಾಲಯಗಳನ್ನು ಕಟ್ಟಿಸುತ್ತಿದ್ದಾರೆ. ಪ್ರವಾಹ ಪೀಡಿತ ಪ್ರದೇಶಗಳ ಜನರಿಗೆ ಸಹಾಯ ಮಾಡುವುದರಲ್ಲೂ ಉತ್ಸಾಯದಿಂದ ತೊಡಗಿಸಿಕೊಂಡಿದ್ದಾರೆ. ವಿದ್ಯಾದಾನ ಅವರು ತೊಡಗಿಸಿಕೊಂಡಿರುವ ಇನ್ನೊಂದು ಅತಿ ದೊಡ್ಡ ಕ್ಷೇತ್ರ

**ಗೌರವ/ ಪ್ರಶಸ್ತಿ/ ಪುರಸ್ಕಾರಗಳು :**

ಡಾ. ಶ್ರೀಮತಿ ಸುಧಾಮೂರ್ತಿ ಅವರಿಗೆ 2006 ರಲ್ಲಿ ಅಂದಿನ ರಾಷ್ಟ್ರಪತಿಗಳಾದ ಅಬ್ದುಲ್ ಕಲಾಂ ಅವರು ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಿದರು. ಭಾರತ ಸರಕಾರ 2006 ನೆಯ ಸಾಲಿನ ಪದ್ಮಶ್ರೀ ಪ್ರಶಸ್ತಿ ನೀಡಿದೆ. ಬಿ.ಇ. (ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಪರೀಕ್ಷೆ) ಯಲ್ಲಿ ಪ್ರಥಮ ಸ್ಥಾನ ಲಭಿಸಿದಾಗ ಕರ್ನಾಟಕದ ಮುಖ್ಯ ಮಂತ್ರಿಗಳಿಂದ ಬೆಳ್ಳಿಯ ಪದಕ ಲಭಿಸಿತ್ತು. ಐಐಟಿ ಕಾನ್ಪೂರದಿಂದ ಡಾಕ್ಟರ್ ಆಫ್ ಸೈನ್ಸ್ ಗೌರವ ಪದವಿ ಎಮ್.ಟೆಕ್. ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ದೊರೆತಾಗ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ದಿಂದ ಬಂಗಾರದ ಪದಕ ದೊರೆತಿದೆ. 2000 ನೆಯ ಸಾಲಿನ ಕರ್ನಾಟಕ ರಾಜ್ಯೋತ್ಸವ ಪುರಸ್ಕಾರ ಲಭಿಸಿದೆ. ಡಾ. ಸಾ.ಶಿ. ಮರುಳಯ್ಯ ಪ್ರಶಸ್ತಿ (2004), ಬಸವಶ್ರೀ ಪ್ರಶಸ್ತಿ. 2023 ನೆಯ ವರ್ಷದ ಪದ್ಮಭೂಷಣ ಪ್ರಶಸ್ತಿ ದೊರೆತಿದೆ.

## CONCLUSION:

ಸುಧಾಮೂರ್ತಿಯವರು ಕೆಲಸದಿಂದ ಮನೆಗೆ ಹಿಂತಿರುಗಿ ಬಂದಾಗ ಅವರು ಸದಾ ಸಮಾಜ ಸೇವೆಯಲ್ಲಿ ದೀನದಲಿತರ, ಬಡವರ ಸೇವೆಯಲ್ಲಿ ನಿರತರಾಗಿರುವ ಸುಧಾಮೂರ್ತಿ ಅವರಿಗೆ ಪತಿ ನಾರಾಯಣ ಮೂರ್ತಿಯವರು ಮನೆಗೆ ಹಿಂತಿರುಗಿದ ಸಮಯದಲ್ಲಿ ಪತ್ನಿ ಮನೆಯಲ್ಲಿ ಇರದೆ ಇರುವ ಸಂದರ್ಭದಲ್ಲಿ ಎಂದೂ ಪ್ರಶ್ನೆ ಮಾಡದ ವ್ಯಕ್ತಿ ಎಂದು ತನ್ನ ಪತಿಯ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಸದಾ ಒಂದಿಲ್ಲೊಂದು ಕಾರ್ಯಗಳಲ್ಲಿ ನಿರತರಾಗಿರುವ ಸುಧಾಮೂರ್ತಿಯವರು ನಿರಂತರ ಕೆಲಸದಲ್ಲಿ ತೊಡಗಿಸಿಕೊಂಡಿರುವುದಕ್ಕೆ ಪ್ರೇರಣೆ ಕೂಡ ಹೌದು. ಸಾಧಾರಣ ಸರಳ ಜೀವನದೊಂದಿಗೆ ಹಸನ್ಮುಖರಾಗಿ ದೀನದಲಿತರು ಬಡವರು ಎಂದು ಭೇದ ಭಾವ ಮಾಡದೆ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ದೇಶದ ಕೀರ್ತಿ ಮುಗಿಲೆತ್ತರಕ್ಕೆ ಬೆಳೆಯುವ ಹಾಗೆ ಮಾಡಿ, ವಿದೇಶಿಗರು ಭಾರತ ದೇಶದತ್ತ ತಿರುಗಿ ನೋಡುವಂತೆ ಮಾಡಿದ ಸುಧಾಮೂರ್ತಿಯವರಿಗೆ ಕೋಟಿ ಕೋಟಿ ನಮನಗಳು.

## REFRENCE BOOKS:

[1]. ನಮ್ಮ ಸಾಧಕರು : ಲೇ. ಕೆ. ಪುಟ್ಟರಂಗಪ್ಪ; : ವಿಕಾಸ ಪ್ರಕಾಶನ ಮಂಡ್ಯ : 2021

[2].ಕನಸಿಗೊಂದು ಕಣ್ಣು (ವ್ಯಕ್ತಿ ಚಿತ್ರಗಳು) : ಲೇ : ಶೂದ್ರ ಶ್ರೀನಿವಾಸ್ : ಕನ್ನಡ ಪುಸ್ತಕ ಪ್ರಾಧಿಕರ ಬೆಂಗಳೂರು : 2011

[3].ಸಾಮಾನ್ಯರಲ್ಲಿ ಅಸಾಮಾನ್ಯರು : ಲೇ : ಸುಧಾಮೂರ್ತಿ : ಸಪ್ನಾ ಬುಕ್ಕ್ ಹೌಸ್ ಬೆಂಗಳೂರು : 2013

[4].ಇವರು ನಮ್ಮವರು : ಲೇ : ಎಂ. ರಾಘವೇಂದ್ರ ದೇಸಾಯಿ : ಬಸವ ಪ್ರಕಾಶನ ಕಲಬುರಗಿ : 2019

[5].ಸ್ಮೃತಿ ಸೌರಭ (ವ್ಯಕ್ತಿ ಚಿತ್ರಗಳು) : ಲೇ : ಚೆನ್ನವೀರ ಕಣವಿ : ಮನೋಹರ ಗ್ರಂಥಮಾಲೆ ಧಾರವಾಡ : 2016

[6].ಸಾರಸತ್ವ (ಸಾಧಕರ ಜೀವನ ಸಾಧನೆ) : ಲೇ : ಡಾ. ಗವಿಸಿದ್ಧಪ್ಪ ಎಚ್. ಪಾಟೀಲ : ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಕಲಬುರಗಿ : 2019

[7].ಹೋರಾಟದ ಹಾದಿಯಲ್ಲಿ ಧೀಮಂತ ಮಹಿಳೆಯರು : ಲೇ : ನೇಮಿಚಂದ್ರ : ನವ ಕರ್ನಾಟಕ ಪ್ರಕಶನ ಬೆಂಗಳೂರು : 2013

[8].ಭಾರತದ ವೀರ ನಾರಿಯರು : ಲೇ : ಕೃಷ್ಣಮೂರ್ತಿ ನಾಡಿಗ : ಗೀತಾ ಸಾಹಿತ್ಯ ಮಂದಿರ ಮೈಸೂರು : 1957